ಈ ದಿನ ದಿನಾಂಕಃ 09-01-2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಎಂ ಟಿ ಎಸ್ ವಕೀಲರಿಂದಃ**

ದಾವೆಯನ್ನು ಸರ್ವೆ ನಂಃ 8 ಕ್ಕೆ ಸಂಬಂಧಪಟ್ಟ ಹಾಗೆ ಸಲ್ಲಿಸಿರುತ್ತಾರೆ. ಸರ್ವೆ ನಂಃ 8 ರಲ್ಲಿ ಒಟ್ಟು 14 ಪೋಡುಗಳಿವೆ. ಸರ್ವೆ ನಂಃ 8/7 ಸಿದ್ದಪ್ಪನವರ ಸರ್ವೆ ನಂಬರ್ ಎಂದರೆ ಸರಿ . ಸರ್ವೆ ನಂಃ 8/7 ರ ಆಸ್ತಿಯಲ್ಲಿ ನನಗೆ ಯಾವುದೇ ಆಸ್ತಿಯನ್ನು ಪರಭಾರೆ ಮಾಡಿರುವುದಿಲ್ಲ ಎಂದರೆ ಸರಿ . ಸರ್ವೆ ನಂಃ 8/7 ವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ಸದರಿ ಆಸ್ತಿಯ ಖಾತೆ ಹಾಗೂ ಪಹಣಿ ಸಿದ್ದಪ್ಪನ ಹೆಸರಿನಲ್ಲಿಯೇ ಇದೆ ಎಂದರೆ ಸರಿ . ಸರ್ವೆ ನಂಃ 8/7 ರಲ್ಲಿ ಯಾವುದೇ ಹಕ್ಕು ಹಾಗೂ ಅನುಭವ ನನಗೆ ಇರುವುದಿಲ್ಲ ಎಂದರೆ ಸರಿ . ದಿಃ 17-01-2018 ರಲ್ಲಿ ನಾವು ಸದರಿ ಸರ್ವೆ ನಂಬರಿನಲ್ಲಿ ತಕರಾರು ಮಾಡಿದ್ದರಿಂದ ವಾದಿ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸುವರ್ಣಮ್ಮ, ಪುರಂದರ , ಶ್ರೀಹರಿ , ಮುರುಳಿ ಮೋಹನ್ ಎಲ್ಲರೂ ಸೇರಿ ನನ್ನ ವಿರುದ್ಧ ಅಸಲು ದಾವೆ ಸಂಃ 19/2018 ರ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಚನ್ನಗಿರಿಯಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ದಾವೆಯಲ್ಲಿ ನಮ್ಮ ವಿರುದ್ಧ ಶಾಶ್ವತ ನಿರ್ಬಂಧಕ್ಕಾಜ್ಞೆ ಆದೇಶ ಆಗಿರುತ್ತದೆ ಎಂದರೆ ಸರಿ .

2. ಶರಣಪ್ಪ ತಂದೆ ಸಿದ್ದಪ್ಪ ಅಸಲು ದಾವೆ ಸಂಃ 14/2018 ರಲ್ಲಿ ಶಾಶ್ವತ ನಿರ್ಬಂಧಕ್ಕಾಜ್ಞೆ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ನ್ಯಾಯಾಲಯದಲ್ಲಿ ದಾವೆಯು ವಜಾಗೊಂಡಿರುತ್ತದೆ ಎಂದರೆ ಸರಿ . ಅದರ ವಿರುದ್ಧವಾಗಿ ಶರಣಪ್ಪನವರು ಆರ್ ಎ ನಂಃ 53/2018 ರಂತೆ ಮೇಲ್ಮನವಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಚನ್ನಗಿರಿಯಲ್ಲಿ ಆರ್ ಎ ನಂಃ 53/2018 ರಲ್ಲಿ ಶಾಶ್ವತ

ನಿರ್ಬಂಧಕ್ಕಾಜ್ಞೆ ಆದೇಶವನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ಆದೇಶಗಳ ವಿರುದ್ಧ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ .

3. ಈ ಮೇಲೆ ಹೇಳಿದ ದಾವೆಗಳು ಈ ದಾವಾ ಸ್ವತ್ತಿಗೆ ಲಗತ್ತಾಗಿರುವ ಆಸ್ತಿಗಳಿಗೆ ಸಲ್ಲಿಸಲಾಗಿತ್ತು ಎಂದರೆ ಸರಿ . ಸದರಿ ದಾವೆಯಲ್ಲಿ ತಕರಾರನ್ನು ನಾನೇ ಬರೆಯಿಸಿ ಹಾಕಿರುತ್ತೇನೆ. ಈ ಮೇಲೆ ನುಡಿದ ಎರಡೂ ದಾವೆಗಳಲ್ಲಿಯೂ ಸಹ ಇದೇ ತಕರಾರನ್ನು ಹಾಕಿರುತ್ತೇನೆ ಎಂದರೆ ಸರಿ . ಸರ್ವೆ ನಂಃ 8/7 ರ ಚೆಕ್ಕುಬಂಧಿ ಸರಿಯಾಗಿದೆ. ಬಸವಾಪುರ ಗ್ರಾಮದ ನಕ್ಷೆಯಲ್ಲಿ ನಕಾಶೆ ಕಂಡ ದಾರಿಯ ಬಗ್ಗೆ ತಕರಾರಿನಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ . ನಕಾಶೆ ಕಂಡ ದಾರಿಯನ್ನು ಜಮೀನುದಾರರು ಒತ್ತುವರಿ ಮಾಡಿರುತ್ತಾರೆ ಎಂದು ತಕರಾರಿನಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ .

4. ಈ ಮೇಲೆ ಹೇಳಿದ ಎರಡೂ ದಾವೆಗಳಲ್ಲಿನ ಸರ್ವೆ ನಂಬರ್ ಗಳಲ್ಲಿಯೂ ಸಹ ನಕಾಶೆ ಕಂಡ ದಾರಿ ಒತ್ತುವರಿ ಆಗಿರುತ್ತದೆ ಎಂದು ತಕರಾರಿನಲ್ಲಿ ಹೇಳಿ ಬರೆಯಿಸಿರುತ್ತೇನೆ ಎಂದರೆ ಸರಿ . ಒತ್ತುವರಿಯಾದ ದಾರಿಯನ್ನು ತೆರವುಗೊಳಿಸುವಂತೆ ತಹಶಿಲ್ದಾರವರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯ ಮೇಲೆ ತೆರವುಗೊಳಿಸುವಂತೆ ಆದೇಶ ಆಗಿರುತ್ತದೆ. ಸದರಿ ಆದೇಶದಂತೆ ನಕಾಶೆ ಕಂಡ ದಾರಿಯನ್ನು ದಿಃ 17-01-2018 ರಂದು ತೆರವುಗೊಳಿಸಲಾಗಿರುತ್ತದೆ. ನಿಡಿ 20 ರಲ್ಲಿರುವ ದಾಖಲೆ ಆದೇಶ ಎಂದರೆ ಸರಿ . ಸದರಿ ದಾಖಲೆಯಲ್ಲಿ ನಮೂದಿಸಿರುವ 19 ಜನರು ಒತ್ತುವರಿ ಮಾಡಿರುತ್ತಾರೆ ಎಂದರೆ ಸರಿ . ನಿಡಿ 20 ರಲ್ಲಿ 19 ಜನರಿಗೂ ನೋಟೀಸ್ ನೀಡಲಾಗಿದ್ದು ಆದೇಶವಲ್ಲ ಎಂದರೆ ಸರಿ . ಸದರಿ ನೋಟೀಸಿನ ನಂತರ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿ . ನೋಟೀಸ್ ಕೊಟ್ಟ ನಂತರ ಅಸಲು ದಾವೆ ನಂಃ 19/2018 ನ್ನು ಸುವರ್ಣಮ್ಮ ಹಾಗೂ ಇತರರು ದಾಖಲಿಸಿರುತ್ತಾರೆ ಎಂದರೆ ಸರಿ . ಹಾಗಾಗಿ ತಹಶಿಲ್ದಾರವರ ಆದೇಶದಂತೆ ನಕಾಶೆ ಕಂಡ ದಾರಿಯನ್ನು ತೆರವುಗೊಳಿಸಿರುವುದಿಲ್ಲ ಎಂದರೆ ಸರಿ . ತಹಶಿಲ್ದಾರವರು ಮಾಡಿರುವ

ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ನಿಡಿ 20 ರಲ್ಲಿರುವ ದಾಖಲೆಯೇ ಆದೇಶ ಎಂದು ತಿಳಿದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

5. ಅಸಲು ದಾವೆ ನಂಃ 19/2018 ರ ನಂತರ ತಹಶಿಲ್ದಾರ್ ರವರು ಯಾವುದೇ ಆದೇಶವನ್ನು ಮಾಡಿರುವುದಿಲ್ಲ.

ವಾದಿ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ  ಕೋರಿದ್ದರಿಂದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

sd/-

1ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.